O.S.No.56.2010 P W -3

ದಿನಾಂಕ 23.10.2024 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು : 6 ನೇ ಪ್ರತಿವಾದಿ ಪರ ಶ್ರೀ ಜೆ. ಎಂ. ವಕೀಲರಿಂದ :

ವಾದಿಯು ನನ್ನ ಭಾಮೈದನ ಹೆಂಡತಿ. ವಾದಿ ದಾವೆಯನ್ನು ತನ್ನ ತಾಯಿ , ಅಕ್ಕ , ತಮ್ಮ , ಅಣ್ಣಂದಿರ ವಿರುದ್ಧ ಹಾಕಿರುತ್ತಾರೆ. ದಾವಾ ಸ್ವತ್ತು ಗೇರ ಹಳ್ಳಿಯಲ್ಲಿದೆ. ಅದರ ಸರ್ವೆ ನಂ. 11, 4 ಎಕರೆ ಇರುತ್ತದೆ. ದಾವಾ ಸ್ವತ್ತು ವಾದಿಯ ತಾಯಿ ಯವರ ಹೆಸರಿನಲ್ಲಿತ್ತು. ನಾನು ದಾವಾ ಸ್ವತ್ತನ್ನು ನೋಡಿರುತ್ತೇನೆ. ಸದರಿ ಸ್ವತ್ತಿನ ಚಕ್ಕುಬಂಧಿ ಪೂರ್ವಕ್ಕೆ ಚನ್ನ ವೀರಪ್ಪ, ಪಶ್ಚಿಮಕ್ಕೆ ಮುಖ್ಯ ರಸ್ತೆ, ಉತ್ತರ ಮತ್ತು ದಕ್ಷಿಣಕ್ಕೆ ಕುಮಾರ ಇರಬಹುದು. ನಿಮ್ಮ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ವಾದಿಯವರು ಸದರಿ ಸ್ವತ್ತನ್ನು ಖರೀದಿಸಲು 50 ಸಾವಿರ ನೀಡಿರುವ ಬಗ್ಗೆ ಹೇಳಿ ಬರೆಸಿದ್ದೀರಾ ಎಂದರೆ ಹೌದು ಎಂದು ನುಡಿಯುತ್ತಾರೆ, ಆ ಬಗ್ಗೆ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಾ ಸ್ವತ್ತನ್ನು ವಾದಿಯವರ ಸಹೋದರ ಮೋಸದಿಂದ ಮಾರಾಟ ಮಾಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಎಷ್ಟು ಜನರಿಗೆ ಈಗಾಗಲೇ ಮಾರಾಟ ಮಾಡಲಾಗಿದೆ ಎಂದು ನನಗೆ ಗೊತ್ತಿಲ್ಲ. ನನಗೆ ದಾವಾ ಸ್ವತ್ತಿನ ಬಗ್ಗೆ ಮಾಹಿತಿ ಇಲ್ಲದಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಈಗ ವಾದಿಯ ಹಿರಿಯ ಸಹೋದರನ ಹೆಸರಿನಲ್ಲಿದೆ . ದಾವಾ ಸ್ವತ್ತು ಪ್ರತಿವಾದಿಯರ ಹೆಸರಿನಲ್ಲಿಲ್ಲ ಎಂದರೆ ಸರಿಯಲ್ಲ. ಮುಂದುವರೆದು ಸಾಕ್ಷಿ ದಾವಾ ಸ್ವತ್ತು ವಾದಿಯ ತಮ್ಮ, ತಂಗಿ ಯ ಸ್ವಾಧೀನದಲ್ಲಿದೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ಸ್ವಾಧೀನದಲ್ಲಿ 6 ನೇ ಪ್ರತಿವಾದಿ ಇದ್ದಾರೆ ಎಂದರೆ ಸರಿಯಲ್ಲ. ನನಗೆ ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳು ಗೊತ್ತಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು ಮುಗಿಯಿತು.</u>**

**<u>ಮರು ವಿಚಾರಣೆ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಒ

ಎರಡನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಕನಕಪುರ